1	2	3	4
4	22	ತಿಮ್ಮಪ್ಪ ಮತ್ತು ಮಕ್ಕಳು	1–00
5	23	ತಿಮ್ಮಪ್ಪ ಬಿನ್ ಮುನಿಸ್ವಾಮಪ್ಪ	2–20
6	32	ರಜೀಯಾಬಿ	0–30
7	34	ಆಟೋ ಬಾಷಾ	0–31
8	35	ಮೌಲಲೀ	0–06
9	36	ಡಿ ಮಹಮ್ಮದ್ ಫಕೃದ್ದಿನ್	0–20
10	38	ಮಹಮ್ಮದ್ ಪ್ಯಾರುಸಾಬಿ	0–27
11	39	ಶಕೀಲ್ ಅಹಮ್ಮದ್	0–27
12	40	ಅಬ್ದುಲ್ ಖಾದರ್	0–29
13	3	ಅಪ್ಪಯ್ಯಣ್ಣ ಮತ್ತು ಮುನಿಶಾಮಿಗೌಡ	2–00
14	16	ಸಂಪಂಗಮ್ಮ	2–00
15	31	ಬಿ ಶ್ರೀನಿವಾಸಯ್ಯ ಬಿನ್ ಬೈರಪ್ಪ	1–38
16	33	ಪೈರೋಜ್‌ಬೀ ಯಿಂದ ನವೀನ್	0–26
17	43	ಮಸ್ತಾಕ್	
		ಒಟ್ಟು	**28–39**

787 (888) ಶ್ರೀ ರಘುಪತಿ ಭಟ್ ಕೆ (ಉಡುಪಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಂದಾಯ ಇಲಾಖೆಯಡಿ ದುಡಿಯುತ್ತಿರುವ 10450 ಗ್ರಾಮ ಸಹಾಯಕರನ್ನು ಖಾಯಂಗೊಳಿಸಿ ಸೇವಾ ಭದ್ರತೆ ನೀಡದೆ ಬಹುಕಾಲದಿಂದ ನಿಗದಿತ ಅಲ್ಪವೇತನ ನೀಡಿ ದುಡಿಸುತ್ತಿರುವುದರಿಂದ ಉಂಟಾಗಿರುವ ಸಮಸ್ಯೆಗಳಿಗೆ ಸರ್ಕಾರ ಸ್ಪಂದಿಸದಿರಲು ಕಾರಣವೇನು ,

ಆ) ಮಾನ್ಯ ಉಚ್ಚ ನ್ಯಾಯಾಲಯದ ಸ್ಪಷ್ಟ ನಿರ್ದೇಶನದನ್ವಯ ಈ ವಿಚಾರದಲ್ಲಿ ಯಾವುದೇ ನಿರ್ಧಾರ ಕೈಗೊಳ್ಳದಿರುವುದರಿಂದ ಇನ್ನು ಮುಂದೆ ಉಂಟಾಗಬಹುದಾದ ಪ್ರತಿಭಟನೆ, ಗೊಂದಲಗಳಿಗೆ ಯಾರು ಹೊಣೆ ,

ಇ) ಮಾನವೀಯ ನೆಲೆಯಲ್ಲಿ ಗ್ರಾಮಮಟ್ಟಲ್ಲಿ ಅನುದಾನದಿಂದ ಕಡಿಮೆ ಸಂಭಾವನೆಯಲ್ಲಿ ನಿಷ್ಠಾವಂತ ಸೇವೆ ಸಲ್ಲಿಸುತ್ತಿರುವ ಗ್ರಾಮ ಸಹಾಯಕರನ್ನು ಖಾಯಂಗೊಳಿಸಲು ಸೇವಾ ನಿಯಮಾವಳಿಗಳನ್ನು ರಚಿಸಿ ಡಿ ದರ್ಜೆಯ ನೌಕರ ಸೌಲಭ್ಯ ನೀಡುವ ಬಗ್ಗೆ ಸರ್ಕಾರದ ನಿಲುವೇನು ,

ಈ) ಕಂದಾಯ ಇಲಾಖೆಯಲ್ಲಿ ಗ್ರಾಮ ಮಟ್ಟದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರನ್ನು ಖಾಯಂಗೊಳಿಸಿ ಕನಿಷ್ಟ ವೇತನವನ್ನೂ ಸಹ ನೀಡದೆ ತ್ರಿಶಂಕು ಸ್ಥಿತಿಯಲ್ಲಿರುವ ನೌಕರರಿಗೆ ಬದಲಿ ವ್ಯವಸ್ಥೆಗೆ ಸರ್ಕಾರ ಕೈಗೊಂಡಿರುವ ಕ್ರಮವೇನು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಕರ್ನಾಟಕ ಗ್ರಾಮ ಕಛೇರಿ ರದ್ದತಿ ಕಾಯಿದೆ 1961ರ 4ನೇ ನಿಯಮಗಳು ದಿ 1 2 63 ರಿಂದ ಅನ್ವಯವಾಗುವಂತೆ ಎಲ್ಲಾ ಗ್ರಾಮೀಣ ಹಂತದ ಹುದ್ದೆಗಳು ರದ್ದಾಗಿರುವುದರಿಂದ ಅಂತಹ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ನೌಕರರನ್ನು ತಾತ್ಕಾಲಿಕ ಆಧಾರದ ಮೇಲೆ ಹಾಗೂ ಮಿತ ವೇತನದ ಮೇಲೆ ಯಾವುದೇ ವಂಶಪಾರಂಪರಾಗತ ಹಕ್ಕುಗಳೂ ಅನ್ವಯವಾಗದಂತೆ ಕಾಲಕಾಲಕ್ಕೆ ಅನುಗುಣವಾಗಿ ದಿ 31 12 78ರಿಂದ ಗ್ರಾಮಲೆಕ್ಕಿಗರಿಗೆ ಸಹಾಯ ಮಾಡಲು ಗ್ರಾಮಸಹಾಯಕರ ಹುದ್ದೆಗಳನ್ನು ಸೃಜಿಸಲಾಗಿದೆ ಸರ್ವೋಚ್ಚ ನ್ಯಾಯಾಲಯವು ಇತ್ತೀಚೆಗೆ ನೀಡಿರುವ ತೀರ್ಪಿನಲ್ಲಿಯೂ ಸಹ ಸದರಿ ಗ್ರಾಮಸಹಾಯಕರ ಸೇವೆಯನ್ನು ಖಾಯಂಗೊಳಿಸಲು ಬರುವುದಿಲ್ಲವೆಂದು ತೀರ್ಪಿತ್ತಿದೆ ಆದ್ದರಿಂದ ಆಡಳಿತಾತ್ಮಕ ಹಿತದೃಷ್ಟಿಯಿಂದ ಗ್ರಾಮಸಹಾಯಕರ ಹುದ್ದೆಗಳನ್ನು ಮುಂದುವರಿಸಿ ಅವರಿಗೆ ಈಗ ರೂ 2000/– ಗಳಂತೆ ಪ್ರತಿ ತಿಂಗಳಿಗೆ ಮಿತವೇತನ ನೀಡಲಾಗುತ್ತಿದೆ

ಆ) ಸರ್ವೋಚ್ಚ ನ್ಯಾಯಾಲಯವು ಗ್ರಾಮಸಹಾಯಕರನ್ನು ಸಕ್ರಮಗೊಳಿಸಲು ಅವಕಾಶವಿಲ್ಲವೆಂದು ತೀರ್ಪಿತ್ತಿದೆ ಗ್ರಾಮಸಹಾಯಕರ ಹುದ್ದೆಗಳು ತಾತ್ಕಾಲಿಕವಾಗಿರುವುದರಿಂದ ಇವರು ಯಾವುದೇ ನೇಮಕಾತಿ ನಿಯಮಗಳನ್ವಯ ನೇಮಕಾತಿ ಹೊಂದದೆ ಇರುವುದರಿಂದ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಗ್ರಾಮಸಹಾಯಕರನ್ನು ಸರ್ಕಾರಿ ಸೇವೆಯಿಂದ ತೆಗೆದುಹಾಕದೇ ಮುಂದುವರಿಸುತ್ತಾ ಬಂದಿರುತ್ತದೆ

ಇ) ಗ್ರಾಮಸಹಾಯಕರ ಹುದ್ದೆಗಳನ್ನು ಮುಂದಿವರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ

ಈ) ಮೇಲಿನ ಪ್ರಶ್ನೆಗೆ ಉತ್ತರಿಸಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

789 (1144) ಶ್ರೀ ರಘುಪತಿ ಭಟ್ ಕೆ (ಉಡುಪಿ) ಮಾನ್ಯ ಉಪ ಮುಖ್ಯ ಮಂತ್ರಿಗಳು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸುಮಾರು 10 ಸಾವಿರ ಕುಟುಂಬಗಳು ಮೂರ್ತೆದಾರಿಕೆಯನ್ನು ಜೀವನೋಪಾಯವನ್ನಾಗಿ ತೊಡಗಿಸಿಕೊಂಡಿರುವುದು ನಿಜವಲ್ಲವೆ ,

ಆ) ಹಾಗಿದ್ದಲ್ಲಿ, ಪ್ರಾಚೀನ ಕುಲಕಸಬಾದ ಮೂರ್ತೆದಾರಿಕೆಯನ್ನು ಗ್ರಾಮೀಣ ಉದ್ದಿಮೆಯಾಗಿ ಪ್ರೋತ್ಸಾಹಿಸುವ ಸರ್ಕಾರ ಯಾವ ಯೋಜನೆ ರೂಪಿಸಿದೆ , ಹಾಗೂ ಅದು ಈಗ ಯಾವ ಹಂತದಲ್ಲಿದೆ ,

ಇ) ಈ ವಿಚಾರದಲ್ಲಿ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಿದೆ ,

ಈ) ಸರ್ಕಾರವು ಮುಂದಿನ ಸಾಲಿನಿಂದ ಪಾನ ನಿಷೇಧ ಕಾನೂನು ತರಲು ಇಚ್ಚಿಸಿದೆಯೇ , ಹಾಗಿದ್ದಲ್ಲಿ, ಆ ಕಾನೂನು ವ್ಯಾಪ್ತಿಯಡಿಯಲ್ಲಿ ಸೇಂದಿಯನ್ನು ತರುವ ಉದ್ದೇಶ ಸರ್ಕಾರಕ್ಕಿದೆಯೇ ?